# ಗ್ರಾಮ ಪಂಚಾಯತ್ ಚುನಾವಣೆ: ಸಂವಿಧಾನ ಹಾಗೂ ಕಾನೂನಿನ ನಿರ್ದೇಶನವೇನು?
# ಪ್ರಜಾತಂತ್ರ ವ್ಯವಸ್ಥೆ ಉಳಿಸಲು ಯಾವುದು ಹಿತ

**ಕೋವಿಡ್–19ರ ಪರಿಸ್ಥಿತಿಯನ್ನು 'ಅಸಾಧಾರಣ ಪರಿಸ್ಥಿತಿ'** ಎಂದು ಪರಿಗಣಿಸಿ ರಾಜ್ಯ ಚುನಾವಣಾ ಆಯೋಗವು ಗ್ರಾಮ ಪಂಚಾಯತ್ ಚುನಾವಣೆಗಳನ್ನು ಮುಂದೂಡಿ ಈಗಾಗಲೇ ಆದೇಶ ಹೊರಡಿಸಿದೆ. ಈ ಆದೇಶದಲ್ಲಿ ಅದು, ಭಾರತದ ಸಂವಿಧಾನದ ಪರಿಚ್ಛೇದ 243–ಕೆಯನ್ನು ಉಲ್ಲೇಖಿಸಿ, ರಾಜ್ಯ ಚುನಾವಣಾ ಆಯೋಗಕ್ಕೆ ಪಂಚಾಯತ್ ಚುನಾವಣೆಗಳನ್ನು ನಡೆಸುವ ಸಂಬಂಧ **ಸಂವಿಧಾನ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಗ್ರಾಮ ಪಂಚಾಯತ್‌ಗಳ ಸಾರ್ವತ್ರಿಕ ಚುನಾವಣೆಗಳನ್ನು** ಅನಿವಾರ್ಯವಾಗಿ **ತಾತ್ಕಾಲಿಕವಾಗಿ ಮುಂದೂಡಲು ತೀರ್ಮಾನಿಸಲಾಗಿದೆ ಎಂದಿದೆ.** ಈ ಹಿನ್ನೆಲೆಯಲ್ಲಿ, **ಸಂವಿಧಾನ ಹಾಗೂ ಕಾನೂನು ಈ ಬಗ್ಗೆ ನಿರ್ದೇಶನ ನೀಡಿರುವದೇನು ಎಂಬುದನ್ನು ಅರ್ಥಮಾಡಿಕೊಳ್ಳುವುದು ಅತ್ಯಂತ ಪ್ರಮುಖವಾಗಿದೆ.** ಅಲ್ಲದೇ ಚುನಾವಣಾ ಆಯೋಗದ ಈ ಆದೇಶವನ್ನು ಆಧರಿಸಿ ರಾಜ್ಯ ಸರ್ಕಾರದ ಮುಂದಿನ ಹೆಜ್ಜೆಗಳೇನಿರಬಹುದು ಎಂಬುದನ್ನೂ ಸಹ ಕೂಲಂಕುಷವಾಗಿ ವಿಮರ್ಶಿಸಬೇಕಾಗಿದೆ.

ಸಂವಿಧಾನದ ವಿಧಿ 243 ಕೆ (1) ಹೇಳುವಂತೆ, *"ಪಂಚಾಯತಿಗಳಿಗೆ ನಡೆಯುವ ಎಲ್ಲ ಚುನಾವಣೆಗಳಿಗೆ ಸಂಬಂಧಪಟ್ಟಂತೆ ಮತದಾರರ ಪಟ್ಟಿಗಳ ತಯಾರಿಕೆಯ ಮತ್ತು ಆ ಎಲ್ಲ ಚುನಾವಣೆಗಳ ನಿರ್ವಹಣೆಯ ಮೇಲಿನ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣವು ರಾಜ್ಯಪಾಲನಿಂದ ನೇಮಕಗೊಳ್ಳುವ ರಾಜ್ಯ ಚುನಾವಣಾ ಆಯುಕ್ತನನ್ನು ಒಳಗೊಂಡಿರುವ ರಾಜ್ಯ ಚುನಾವಣಾ ಆಯೋಗದಲ್ಲಿ ನಿಹಿತವಾಗಿರತಕ್ಕದ್ದು."* **ಅಂದರೆ, ಈ ಎಲ್ಲಾ ಪ್ರಕ್ರಿಯೆಗಳನ್ನು ನಿಗದಿತ ಸಮಯಕ್ಕೆ ಸರಿಯಾಗಿ ಆಗುವಂತೆ ನೋಡಿಕೊಳ್ಳುವುದು ರಾಜ್ಯ ಚುನಾವಣಾ ಆಯೋಗದ ಆದ್ಯ ಕರ್ತವ್ಯವೇ ಹೊರತೂ ಅಧಿಕಾರವಲ್ಲ.** ಆದರೆ, **ಯಾವುದೇ ಕಾರಣಕ್ಕೂ ತಮ್ಮ ಜವಾಬ್ದಾರಿಯನ್ನು ಸಕಾಲಕ್ಕೆ ಸರಿಯಾಗಿ ನಿರ್ವಹಿಸದೇ, ಪ್ರಕ್ರಿಯೆ ಪೂರೈಸುವಲ್ಲಿ,** ವಿಳಂಬ ನೀತಿ **ಅನುಸರಿಸಿದರೆ, ಅದು ಕರ್ತವ್ಯಲೋಪವೆನಿಸುವುದಲ್ಲದೇ, ಒಂದು ರೀತಿಯಲ್ಲಿ ಉದ್ದೇಶಪೂರ್ವಕ ನಡೆಯೇನೋ ಎಂಬ ಅನುಮಾನಕ್ಕೆ ಎಡೆಮಾಡಿಕೊಡುತ್ತದೆ.**

ಸ್ಥಾನಗಳ ಮಿಸಲಾತಿ ಕುರಿತಾದ ರಾಜ್ಯ ಸರ್ಕಾರದ ಅಧ್ಯಾದೇಶವು 31-03-2020ರಂದೇ ಪ್ರಕಟವಾಗಿತ್ತು. ಚುನಾವಣಾ ವೇಳಾಪಟ್ಟಿಯ ಅಧಿಸೂಚನೆಯನ್ನು ಹೊರಡಿಸುವುದಕ್ಕೂ **ಮೊದಲಿನ ನಲವತ್ತೈದು ದಿನಗಳಿಗೆ ಕಡಿಮೆ ಇಲ್ಲದಂತೆ ಸ್ಥಾನಗಳ ಮೀಸಲಾತಿಯನ್ನು ಮತ್ತು ಚುನಾವಣಾ ವೇಳಾಪಟ್ಟಿಯನ್ನು ಘೋಷಿಸತಕ್ಕದ್ದು** ಎಂದು ಕರ್ನಾಟಕ ಗ್ರಾಮ ಸ್ವರಾಜ್ ಹಾಗೂ ಪಂಚಾಯತ್ ರಾಜ್ ಕಾಯಿದೆಯ ಪ್ರಕರಣ 308ಎಎಯಲ್ಲಿ ಸ್ಪಷ್ಟವಾಗಿ ಹೇಳಿದೆ. ಹೀಗಿದ್ದರೂ, **ಇಲ್ಲಿಯವರೆಗೆ ರಾಜ್ಯ ಚುನಾವಣಾ ಆಯೋಗವು** ದಿನಾಂಕ 22-05-2020 ರಂದು ಚುನಾವಣೆ ನಡೆಸುವ ಬಗ್ಗೆ ಅಭಿಪ್ರಾಯ ಕೇಳಿ ಜಿಲ್ಲಾಧಿಕಾರಿಗಳಿಗೆ ಬರೆದ ಪತ್ರದ ಹೊರತಾಗಿ, **ಅಧ್ಯಾದೇಶವಾಗಿ 2 ತಿಂಗಳಾದರೂ, ಮೀಸಲು ಸ್ಥಾನಗಳನ್ನು ಆವರ್ತನೆಯ ಮೇಲೆ ಹಂಚಿಕೆ ಮಾಡಿ ನಿಗದಿಪಡಿಸುವ ಪ್ರಕ್ರಿಯೆಗೆ ಸಂಬಂಧಿಸಿದಂತಾಗಲೀ,** ಚುನಾವಣೆಗೆ ಸಂಬಂಧಿಸಿದಂತೆ ಮತದಾರರ ಪಟ್ಟಿ ತಯಾರಿಕೆಯ ಪ್ರಕ್ರಿಯೆಯನ್ನಾಗಲೀ ಪ್ರಾರಂಭಿಸಲು ಜಿಲ್ಲಾಧಿಕಾರಿಗಳಿಗೆ ಅಥವಾ ಬೇರೆ ಯಾವುದೇ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಿದ ಬಗ್ಗೆ ಎಲ್ಲಿಯೂ ಉಲ್ಲೇಖಿಸಿಲ್ಲ.

ಈಗಿನ ಪರಿಸ್ಥಿತಿಯ ಆಧಾರದ ಮೇಲೆ ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರವು ಲಾಕ್‌ಡೌನ್ ಮಾರ್ಗಸೂಚಿಯಲ್ಲಿ ಹಲವಾರು ಅಂಶಗಳನ್ನು ಸಡಿಲಗೊಳಿಸಿದೆ. ರಾಜ್ಯದೆಲ್ಲೆಡೆ ಸಾರ್ವಜನಿಕ ಚಟುವಟಿಕೆಗಳು, ದೈನಂದಿನ ಕೆಲಸಕಾರ್ಯಗಳು, ಸಾರಿಗೆ ಸಂಪರ್ಕಗಳು ಪ್ರಾರಂಭವಾಗಿವೆ. ಸರ್ಕಾರಿ-ಸರ್ಕಾರೇತರ ಕಛೇರಿಗಳು ಕಾರ್ಯನಿರ್ವಹಿಸಲು ಪ್ರಾರಂಭಿಸಿ ತಿಂಗಳು ಕಳೆದಿದೆ. ಇಷ್ಟು ದಿನ ದಿವ್ಯ ಮೌನ ವಹಿಸಿದ್ದ **ರಾಜ್ಯ ಚುನಾವಣಾ ಆಯೋಗವು ಲಾಕ್‌ಡೌನ್ ನಿಯಮಗಳೆಲ್ಲಾ ಸಡಿಲಿಕೆಯಾದ ನಂತರ** ಚುನಾವಣೆಗೆ ಸಂಬಂಧಿಸಿದಂತೆ ಮತದಾರರ ಪಟ್ಟಿ ತಯಾರಿಕೆ, ಮತದಾನ ಮತ್ತು ಮತ ಎಣಿಕೆ ದಿನಾಂಕಗಳಂದು ಓಡಾಟ ಮತ್ತು ಒಂದು ಕಡೆ ಸೇರಬೇಕಾದ ಸಂದರ್ಭಗಳು ಅನಿವಾರ್ಯವಾಗಿ ಉಂಟಾಗುವುದರಿಂದ ಜನಸಾಮಾನ್ಯರ ಆರೋಗ್ಯದ ರಕ್ಷಣೆಗೆ ಬಾಧಕ ಉಂಟಾಗುತ್ತದೆ ಎಂಬ ಕಾರಣ ನೀಡಿ **ಚುನಾವಣೆ ಮುಂದೂಡಿರುವುದು ಯಾಕೆ** ಎಂಬುದೇ ಜಿಜ್ಞಾಸೆಯಾಗಿದೆ. ಇದರಿಂದಾಗಿ **ಗ್ರಾಮೀಣ ಕರ್ನಾಟಕದಲ್ಲಿ ಯಾವುದೇ ಸ್ಥಳೀಯ ಸರ್ಕಾರವಿಲ್ಲದ ನಿರ್ವಾತ ಪರಿಸ್ಥಿತಿ ಉಂಟಾಗುವ ಸ್ಥಿತಿ ಬಂದೊದಗಿದೆ.**

ಹೀಗಿರುವಾಗ, ರಾಜ್ಯ ಸರ್ಕಾರ ಈ ನಿರ್ವಾತದ ಪರಿಸ್ಥಿತಿಯನ್ನು ನಿಭಾಯಿಸಲು ಯಾವ ನಿರ್ಧಾರ ಕೈಗೊಳ್ಳುತ್ತದೆ ಎಂಬುದು ಅತ್ಯಂತ ಮಹತ್ವದ್ದು. **ಈ ಹಿಂದೆಯೇ, ರಾಜ್ಯ ಚುನಾವಣಾ ಆಯೋಗವು ತನ್ನ ನಿರ್ಧಾರವನ್ನು ಪ್ರಕಟಿಸುವ ಮೊದಲೇ,** ಹಲವೆಡೆ ರಾಜ್ಯ ಸರ್ಕಾರದ ಪ್ರತಿನಿಧಿಯಾದ ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರಾದ ಶ್ರೀ ಕೆ.ಎಸ್. ಈಶ್ವರಪ್ಪನವರು *'ಕೊರೋನಾ ತುರ್ತು ಪರಿಸ್ಥಿತಿ ಇರುವುದರಿಂದ ಚುನಾವಣೆ ನಡೆಸಲು ಸಾಧ್ಯವಿಲ್ಲ. ಅಂತಹ ಪರಿಸ್ಥಿತಿಯಲ್ಲಿ ಸರ್ಕಾರದ ಮುಂದೆ 3 ಆಯ್ಕೆಗಳಿವೆ.* ***ಈಗಿರುವ ಸ್ಥಳೀಯ ಸರ್ಕಾರವನ್ನೇ ತಾತ್ಕಾಲಿಕವಾಗಿ ಚುನಾವಣೆ ನಡೆಸುವವರೆಗೆ ಮುಂದುವರಿಸುವುದು, ಆಡಳಿತಾಧಿಕಾರಿಗಳ ನೇಮಕ ಮಾಡುವುದು ಅಥವಾ ಆಡಳಿತ ಸಮಿತಿಯ ನೇಮಕ ಮಾಡುವುದು.'*** ಅವರೇ ಹೇಳಿರುವಂತೆ, 'ಆಡಳಿತ ಸಮಿತಿ ನೇಮಕ ಸೂಕ್ತ ಎಂದು ತೀರ್ಮಾನಿಸಿ, ಕಾನೂನು ಇಲಾಖೆಯ ಜೊತೆ ಚರ್ಚಿಸಿದಾಗ ಆಡಳಿತ ಸಮಿತಿ ನೇಮಕ ಮಾಡಲು ಅವಕಾಶವಿದೆ ಎಂದಿದೆ. ರಾಜ್ಯದ ಅಡ್ವೋಕೇಟ್ ಜನರಲ್ ಜೊತೆ ಕೂಡಾ ಈ ವಿಷಯ ಚರ್ಚಿಸಿದಾಗ ಕರ್ನಾಟಕ ಗ್ರಾಮ ಸ್ವರಾಜ್ ಹಾಗೂ ಪಂಚಾಯತ್ ರಾಜ್ ಕಾಯಿದೆಯ 321ನೇ ಪ್ರಕರಣದ ಪ್ರಕಾರ ಆಡಳಿತ ಸಮಿತಿ ನೇಮಕಕ್ಕೆ ಅವಕಾಶವಿದೆ, ಮಾಡಬಹುದು ಎಂದು ಅಭಿಪ್ರಾಯ ಪಟ್ಟಿದ್ದಾರೆ'.

*ಕರ್ನಾಟಕ ಗ್ರಾಮ ಸ್ವರಾಜ್ ಹಾಗೂ ಪಂಚಾಯತ್ ರಾಜ್ ಅಧಿನಿಯಮ 1993ರ* ***ಪ್ರಕರಣ 321ರ ಪ್ರಕಾರ, "ಈ ಅಧಿನಿಯಮವನ್ನು ಜಾರಿಗೆ ತರುವಾಗ ಯಾವುದೇ ತೊಂದರೆಯು ಉದ್ಭವಿಸಿದಲ್ಲಿ ಸರ್ಕಾರವು ಸಂದರ್ಭವು ಅಗತ್ಯಪಡಿಸಬಹುದಾದಂಥ, ತೊಂದರೆಯನ್ನು ನಿವಾರಿಸಲು ಅಗತ್ಯವೆಂದು ಕಂಡುಬರುವಂಥ ಏನನ್ನಾದರೂ, ರಾಜ್ಯಪತ್ರದಲ್ಲಿ ಪ್ರಕಟಿಸುವ ಆದೇಶದ ಮೂಲಕ ಮಾಡಬಹುದು."*** ಈ ಪ್ರಕರಣವು ***'ಈ ಅಧಿನಿಯಮವನ್ನು ಜಾರಿಗೆ ತರುವಾಗ ಯಾವುದೇ ತೊಂದರೆಯು ಉದ್ಭವಿಸಿದಲ್ಲಿ*** ಎಂಬುದನ್ನು ಸ್ಪಷ್ಟೀಕರಿಸಿದೆ. ಅಂದರೆ **ಇದೇ ಕಾಯಿದೆಯನ್ನು** ಜಾರಿಗೆ ತರುವಾಗ **ಮಾತ್ರ** ಯಾವುದಾದರೂ ತೊಂದರೆ ಉದ್ಭವಿಸಿದಾಗ, **ಆ ತೊಂದರೆಯನ್ನು ನಿವಾರಿಸಲು ಮಾತ್ರ** ಈ ಪ್ರಕರಣವನ್ನು ಬಳಸಲು ಸಾಧ್ಯವೇ **ಹೊರತೂ ಬೇರೆ ಯಾವುದೋ ಸೀಮಿತ ಪರಿಸ್ಥಿತಿಗೆ ಯಾವುದೇ ಸರ್ಕಾರ ರೂಪಿಸಿದ ಕಾನೂನು, ನಿಯಮ, ಅಧ್ಯಾದೇಶ** ಅಥವಾ ಸಂದರ್ಭಕ್ಕೆ **ಅನುಗುಣವಾಗಿ** ಈ ಕಾನೂನಿನ ಮೂಲಸ್ವರೂಪವನ್ನು ಬದಲಾಯಿಸುವಂತಹ ಆದೇಶವನ್ನು ನೀಡಲು 321ನೇ ಪ್ರಕರಣವು ಅವಕಾಶ ನೀಡುವುದಿಲ್ಲ. **ಆದರೆ, ಸರ್ಕಾರಕ್ಕೆ ನಿಗದಿತ ಅವಧಿಗೆ, ಸೀಮಿತ ಅಧಿಕಾರ ನೀಡಿ ಉಲ್ಲೇಖಿಸಿರುವ ಈ 321ನೇ ಪ್ರಕರಣವನ್ನು ನಮ್ಮ ರಾಜ್ಯ ಸರ್ಕಾರವು ಕೈಗೆ ಸಿಕ್ಕಿದ 'ಖಾಲಿ ಚೆಕ್'ನಂತೆ ಬಳಸಿಕೊಂಡು ತನ್ನ ಉದ್ದೇಶ ಪೂರೈಕೆಗೆ ಅಗತ್ಯವಿರುವಷ್ಟು 'ಅಧಿಕಾರ'ವನ್ನು ಬರೆದುಕೊಳ್ಳುವ ಸಲುವಾಗಿ ಬ್ರಹ್ಮಾಸ್ತ್ರವಾಗಿಸಿಕೊಳ್ಳಲು ಸಾಧ್ಯವಿಲ್ಲ.**

ಇದೇ ಕಾಯಿದೆಯ 8ನೇ ಪ್ರಕರಣವು **ಆಡಳಿತಾಧಿಕಾರಿ ಹಾಗೂ ಆಡಳಿತ ಸಮಿತಿಯ ನೇಮಕದ** ಸಾಧ್ಯಾಸಾಧ್ಯತೆಯ ಬಗ್ಗೆ ಬೆಳಕು ಚೆಲ್ಲುತ್ತದೆ. ಕಾಯಿದೆಯ ಪ್ರಕರಣ 8(1)(ಎ) ಹೇಳುವುದೇನೆಂದರೆ, **"ಗ್ರಾಮ ಪಂಚಾಯತ್ 'ಸ್ಥಾಪನೆ'ಯಾದ ಸಂದರ್ಭದಲ್ಲಿ (i)** ಗ್ರಾಮ ಪಂಚಾಯತ್ ಸದಸ್ಯರ ಚುನಾವಣೆಯನ್ನು ನಡೆಸಲು ಯಾವುದೇ ತೊಂದರೆಯ ಕಾರಣದಿಂದಾಗಿ (ii) 5ನೇ ಪ್ರಕರಣದ (6)ನೇ ಉಪಪ್ರಕರಣದ ಅಡಿಯಲ್ಲಿ ನಡೆಸಲಾದ ಎರಡು ಅನುಕ್ರಮ ಚುನಾವಣೆಗಳಲ್ಲಿ ಅಂಥ ಸದಸ್ಯರನ್ನು ಚುನಾಯಿಸಲು ವಿಫಲವಾಗಿರುವ ಕಾರಣದಿಂದಾಗಿ; ಅಥವಾ (iii) ಇತರ ಯಾವುದೇ ಸಾಕಷ್ಟು ಕಾರಣದಿಂದಾಗಿ, ಆದೇನೆ ಇರಲಿ, **ರಚಿಸಲು ಸಾಧ್ಯವಿಲ್ಲವೆಂದು** ಮನದಟ್ಟಾದರೆ, (ಬಿ) **ಗ್ರಾಮ ಪಂಚಾಯತಿಗೆ ಯಾವುದೇ ಸಾರ್ವತ್ರಿಕ ಚುನಾವಣೆಯಲ್ಲಿ** ಯಾವನೇ ಸದಸ್ಯನು ಚುನಾಯಿತನಾಗದಿದ್ದರೆ ಅಥವಾ ಒಟ್ಟು ಸಂಖ್ಯೆಯ ಮೂರನೇ ಎರಡರಷ್ಟಕ್ಕಿಂತಲೂ ಕಡಿಮೆ ಸದಸ್ಯರು ಚುನಾಯಿತರಾಗಿದ್ದರೆ, **ಆ ಸಂದರ್ಭದಲ್ಲಿ ಮಾತ್ರ** ಡೆಪ್ಯುಟಿ ಕಮಿಷನರ್ ಅವರಿಗೆ ಅಧಿಸೂಚನೆಯ ಮೂಲಕ, (i) ಚುನಾಯಿತರಾಗಲು ಅರ್ಹರಾದ ವ್ಯಕ್ತಿಗಳನ್ನು ಒಳಗೊಂಡ ಆಡಳಿತ ಸಮಿತಿಯನ್ನು ನೇಮಕ ಮಾಡತಕ್ಕದ್ದು ಅಥವಾ (ii) ಆಡಳಿತಾಧಿಕಾರಿಯನ್ನು ನೇಮಕ ಮಾಡತಕ್ಕದ್ದು.

ಅಂದರೆ ಪ್ರಕರಣ 8(1)(ಎ) ಹೇಳುವಂತೆ **ಗ್ರಾಮ ಪಂಚಾಯತ್ ಸ್ಥಾಪನೆಯಾಗುವ ಸಂದರ್ಭದಲ್ಲಿ ಮಾತ್ರ ಕಾಯಿದೆಯ ಈ ಪ್ರಕರಣ ಅನ್ವಯವಾಗುತ್ತದೆ. ಆದರೆ ಈಗಾಗಲೇ ಸ್ಥಾಪನೆಯಾಗಿ 5 ರಿಂದ 30 ವರ್ಷಗಳೇ ಕಳೆದಿರುವ ಗ್ರಾಮ ಪಂಚಾಯತ್‌ಗಳ ರಚನೆಯ ಸಂದರ್ಭದಲ್ಲಿ ಆಡಳಿತಾಧಿಕಾರಿ ಅಥವಾ ಆಡಳಿತ ಸಮಿತಿ ನೇಮಕ ಮಾಡಲು ಯಾವುದೇ ಅವಕಾಶವನ್ನು ಈ ಪ್ರಕರಣ ನೀಡುವುದಿಲ್ಲ.** ಹೀಗಿರುವಾಗ **ಚುನಾವಣೆ ನಡೆಸದೇ ನಿರ್ವಾತ ಪರಿಸ್ಥಿತಿ ಉಂಟಾಗಿರುವಂತಹ** ಇಂದಿನ ಪರಿಸ್ಥಿತಿಗೆ ಈ ಪ್ರಕರಣ ಅನ್ವಯವಾಗುವುದಿಲ್ಲ.

ಪ್ರಕರಣ 8(1)(ಬಿ) ಹೇಳುವಂತೆ **ಸಾರ್ವತ್ರಿಕ ಚುನಾವಣೆಯಾಗಿ ಆ ಚುನಾವಣೆಯಲ್ಲಿ ಯಾವುದೇ ಸದಸ್ಯನು ಚುನಾಯಿತನಾಗದಿದ್ದರೆ** ಮಾತ್ರ ಕಾಯಿದೆಯ ಈ ಪ್ರಕರಣ ಅನ್ವಯವಾಗುತ್ತದೆ ಹೊರತೂ, **ಚುನಾವಣೆಯನ್ನೇ ನಡೆಸದೇ ಆಡಳಿತಾಧಿಕಾರಿ ಅಥವಾ ಆಡಳಿತ ಸಮಿತಿ ನೇಮಕ ಮಾಡಲು ಸಾಧ್ಯವಿಲ್ಲ. ಹೀಗಾಗಿ ರಾಜ್ಯ ಸರ್ಕಾರವು ಚುನಾವಣೆಯಾಗದೇ ಇರುವ ಈ ಸಂದರ್ಭದಲ್ಲಿ ಆಡಳಿತಾಧಿಕಾರಿ ಅಥವಾ ಆಡಳಿತ ಸಮಿತಿ ನೇಮಿಸುವ ನಿರ್ಧಾರ ಕೈಗೊಳ್ಳುವಂತೆಯೇ ಇಲ್ಲ. ಒಂದೊಮ್ಮೆ ಹಾಗೆ ಮಾಡಿದರೆ, ರಾಜ್ಯ ಸರ್ಕಾರದ ಆ ನಿರ್ಧಾರವು ಕಾನೂನು ಉಲ್ಲಂಘನೆಯಾಗುತ್ತದೆ.**

ಇದೇ ಕಾಯಿದೆಯ ಪ್ರಕರಣ 47ರ ಪ್ರಕಾರ **ಗ್ರಾಮ ಪಂಚಾಯತ್ ರಚನೆಯಾದ ನಂತರ** *"ಗ್ರಾಮ ಪಂಚಾಯತ್‌ನ ಅಧ್ಯಕ್ಷನ ಹುದ್ದೆಯು ಖಾಲಿ ಇರುವ ಅವಧಿಯಲ್ಲಿ ಉಪಾಧ್ಯಕ್ಷನು, ಅಧ್ಯಕ್ಷನು ಹಾಗೂ ಉಪಾಧ್ಯಕ್ಷನು ಇಲ್ಲದಿದ್ದಾಗ ಸಂಬಂಧಿಸಿದ ಗ್ರಾಮ ಪಂಚಾಯತ್‌ನ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅಧ್ಯಕ್ಷನು, ಅಂಥ ಅಧ್ಯಕ್ಷನು ಇಲ್ಲದಿದ್ದಾಗ ಡೆಪ್ಯುಟಿ ಕಮಿಷನರ್ ಅವರು ನೇಮಕ ಮಾಡಿದ ಒಬ್ಬ ಅಧಿಕಾರಿಯು, ಅಧ್ಯಕ್ಷನು ಕ್ರಮಬದ್ಧವಾಗಿ ಚುನಾಯಿತನಾಗುವವರೆಗೆ ಅಧ್ಯಕ್ಷನ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅವನ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು."* **ಆದರೆ ಚುನಾವಣೆಯನ್ನೇ ಮಾಡದೇ, ಗ್ರಾಮ ಪಂಚಾಯತ್ ರಚನೆಯೇ ಆಗದೇ ಡೆಪ್ಯೂಟಿ ಕಮಿಷನರ್ ಈ ನೇಮಕಾತಿ ಮಾಡಲು ಅಧಿಕಾರವಿಲ್ಲ.**

ಇನ್ನುಳಿದಿರುವ ಆಯ್ಕೆ **ಸ್ಥಳೀಯ ಸರ್ಕಾರವನ್ನೇ ತಾತ್ಕಾಲಿಕವಾಗಿ ಚುನಾವಣೆ ನಡೆಸುವವರೆಗೆ ಮುಂದುವರಿಸುವುದು.** ಆದರೆ, ಸಂವಿಧಾನವಾಗಲೀ, ಕಾಯಿದೆಯಾಗಲೀ, ಈ ರೀತಿಯ ತಾತ್ಕಾಲಿಕ, ಮಧ್ಯಂತರ ಸ್ಥಳೀಯ ಸರ್ಕಾರಕ್ಕೆ ಯಾವುದೇ ಅವಕಾಶ ನೀಡಿಲ್ಲ. ಬದಲಾಗಿ, **ಪಂಚಾಯತ್ ಚುನಾವಣೆಯನ್ನೇ ನಿಗದಿತ ಕಾಲಕ್ಕೆ ಸರಿಯಾಗಿ ಮಾಡಬೇಕು ಎಂಬುದನ್ನು ಸ್ಪಷ್ಟವಾಗಿ ನಿರ್ದೇಶಿಸಿದೆ.** ಪಂಚಾಯತ್ ರಾಜ್ ಸಂಸ್ಥೆಗಳನ್ನು ಸದೃಢಗೊಳಿಸಲು ಅದಕ್ಕೊಂದು ನಿಶ್ಚಿತತೆ, ನಿರಂತರತೆ ಮತ್ತು ಶಕ್ತಿಯನ್ನು ತುಂಬುವುದು ಅತ್ಯಗತ್ಯ ಎಂದು ಪರಿಗಣಿಸಿಯೇ, ಸಂವಿಧಾನದ 73ನೇ ತಿದ್ದುಪಡಿ ಮಾಡುವಾಗ, ಪಂಚಾಯತ್ ರಚನೆಯ ಅವಧಿಯನ್ನು 5 ವರ್ಷಕ್ಕೆ ನಿಗದಿಗೊಳಿಸಿ, ಯಾವುದೇ ಕಾರಣಕ್ಕೂ ಪಂಚಾಯತ್ ಚುನಾವಣೆಯನ್ನು ಮುಂದೂಡಬಾರದೆಂಬ ಕಟ್ಟುನಿಟ್ಟಿನ ಅಂಶವನ್ನು ಸಂವಿಧಾನದ 243ಇ

ವಿಧಿಯಲ್ಲಿ ಸಷ್ಟವಾಗಿ ಸೇರ್ಪಡೆಗೊಳಿಸಲಾಗಿದೆ. ಹೀಗಾಗಿ ರಾಜ್ಯ ಸರ್ಕಾರದ ಮುಂದಿರುವ ಮೂರೂ ಆಯ್ಕೆಗಳಿಗೂ ಯಾವುದೇ ಕಾನೂನಿನ ಚೌಕಟ್ಟಾಗಲೀ, ಸಂವಿಧಾನದ ಪರಿಧಿಯಾಗಲೀ ಇಲ್ಲ.

ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಭಿಪ್ರಾಯದಂತೆ ರಾಜ್ಯ ಸರ್ಕಾರವು ರಾಜ್ಯದೆಲ್ಲೆಡೆ ಲಾಕ್‌ಡೌನ್ ಮಾರ್ಗಸೂಚಿಯಲ್ಲಿ ಹಲವಾರು ಅಂಶಗಳನ್ನು ಸಡಿಲಗೊಳಿಸಿ ಸಾರ್ವಜನಿಕ ಚಟುವಟಿಕೆಗಳು, ದೈನಂದಿನ ಕೆಲಸಕಾರ್ಯಗಳು, ಸಾರಿಗೆ ಸಂಪರ್ಕಗಳು ಕಾರ್ಯನಿರ್ವಹಿಸಲು ಪ್ರಾರಂಭಿಸಿವೆ. ಸರ್ಕಾರಿ–ಸರ್ಕಾರೇತರ ಕಛೇರಿಗಳು ಪ್ರಾರಂಭವಾಗಿ ತಿಂಗಳು ಕಳೆದಿದೆ. ರಾಜ್ಯದಾದ್ಯಂತ ಉಳಿದೆಲ್ಲಾ ಪರಿಸ್ಥಿತಿಗಳಲ್ಲಿ ಕೋವಿಡ್ ಅಗತ್ಯ ನಿಯಮಗಳನ್ನು ಪಾಲಿಸಿಯೇ ಚಟುವಟಿಕೆಗಳು ನಡೆಯುತ್ತಿರುವಾಗ, ಗ್ರಾಮ ಮಟ್ಟದಲ್ಲಿ ಈ ನಿಯಮಗಳನ್ನು ಪಾಲಿಸಿ ಚುನಾವಣೆ ನಡೆಸುವುದು ಕಷ್ಟವೇನಲ್ಲ. ಕೋವಿಡ್ ಪರಿಸ್ಥಿತಿ ಎಲ್ಲಾ ಜಿಲ್ಲೆಗಳಲ್ಲಿ ಒಂದೇ ರೀತಿ ಇಲ್ಲ. ಆಯಾ ಜಿಲ್ಲೆಗಳ, ತಾಲೂಕುಗಳ, ಪ್ರದೇಶಗಳ ಪರಿಸ್ಥಿತಿಗೆ ಅನುಗುಣವಾಗಿ ಅಗತ್ಯವಿರುವ ಕೋವಿಡ್ ನಿಯಮ ಪಾಲಿಸಿ ಚುನಾವಣೆ ಹಾಗೂ ಅದರ ಪ್ರಕ್ರಿಯೆಗಳನ್ನು ಯೋಜಿಸಬಹುದು. ಕೋವಿಡ್ ಪರಿಸ್ಥಿತಿಯಿಂದ ಚಲನವಲನಗಳೇ ಸಾಧ್ಯವಿಲ್ಲದಿರುವ ಗ್ರಾಮೀಣ ಪ್ರದೇಶಗಳಿದ್ದರೆ, ಅಂತಹ ಪ್ರದೇಶಗಳಲ್ಲಿ ಹಂತ–ಹಂತವಾಗಿ ಚುನಾವಣೆ ಹಾಗೂ ಅದರ ಪ್ರಕ್ರಿಯಗಳನ್ನು ನಡೆಸಬಹುದು. ಇಷ್ಟೆಲ್ಲಾ ಅವಕಾಶವಿದ್ದರೂ, 'ಅಸಾಧಾರಣ ಪರಿಸ್ಥಿತಿ' ಎಂಬ ಕಾರಣ ನೀಡಿ ರಾಜ್ಯ ಚುನಾವಣಾ ಆಯೋಗ ಚುನಾವಣೆಯನ್ನು ಮುಂದೂಡುವ ನಿರ್ಧಾರ ಕೈಗೊಂಡು ಸ್ಥಳೀಯ ಸರ್ಕಾರದ ವ್ಯವಸ್ಥೆಯನ್ನು ಪಲ್ಲಟಗೊಳಿಸುವ ಪ್ರಜಾತಂತ್ರಕ್ಕೇ ಮಾರಕವಾದ ಎಲ್ಲಾ ದುರಾಲೋಚನೆಗಳಿಗೆ ಕುಮ್ಮಕ್ಕು ನೀಡುತ್ತಿದೆ.

ಒಂದೊಮ್ಮೆ, ರಾಜ್ಯ ಚುನಾವಣಾ ಆಯೋಗ ಹೇಳಿರುವಂತೆ, ಕೊರೊನಾದಿಂದಾಗಿ ಒಂದೊಮ್ಮೆ ಚುನಾವಣೆ ನಡೆಸಲಾಗದಂತಹ 'ಅಸಾಧಾರಣ ಪರಿಸ್ಥಿತಿ' ಉಂಟಾಗಿದೆ ಎಂದಾದರೆ, ಈ 'ಅಸಾಧಾರಣ ಪರಿಸ್ಥಿತಿ'ಯನ್ನು ನಿಭಾಯಿಸಲು ಪ್ರಜಾತಂತ್ರ ವ್ಯವಸ್ಥೆಗೆ ಧಕ್ಕೆ ಬರದಂತಹ, ಸಾಮಾಜಿಕ ನ್ಯಾಯದ ನೆಲೆಯೇನು ಎಂದು ನೋಡುವುದು ಬಹಳ ಪ್ರಮುಖವಾದದ್ದು. ಚುನಾವಣೆ ಆಯೋಗವು ಹೇಳಿರುವ 'ಅಸಾಧಾರಣ ಪರಿಸ್ಥಿತಿ'ಯನ್ನು ಇಲ್ಲಿಯವರೆಗೆ ಸಮರ್ಥವಾಗಿ ನಿಭಾಯಿಸಿದ ಸ್ಥಳೀಯ ಸರ್ಕಾರದ ಪಾತ್ರ ಗಣನೀಯವಾಗಿದೆ. ಈ ಕಾರಣದಿಂದಾಗಿಯೇ, ಇಡೀ ದೇಶದಲ್ಲಿ ಕೇರಳ ಬಿಟ್ಟರೆ, ಇಲ್ಲಿಯವರೆಗೆ ಈ ಪರಿಸ್ಥಿತಿಯನ್ನು ಉತ್ತಮವಾಗಿ ನಿಭಾಯಿಸಿದ ರಾಜ್ಯ ಎಂಬ ಹೆಗ್ಗಳಿಕೆಗೆ ಕರ್ನಾಟಕ ಪಾತ್ರವಾಗಿದೆ. ಸ್ಥಳೀಯ ಮಟ್ಟದಲ್ಲಿ ಜನಾದೇಶವಿರುವ ಚುನಾಯಿತ ಸರ್ಕಾರವಿರುವುದರಿಂದಲೇ, ಅದು ತನ್ನ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸಿದ್ದರಿಂದಲೇ ಇದು ಸಾಧ್ಯವಾಗಿದೆ. ಹೀಗಾಗಿ, ಒಂದೊಮ್ಮೆ ಚುನಾವಣೆ ನಡೆಸಲು ಸಾಧ್ಯವೇ ಇಲ್ಲವೆಂದಾದರೆ, ಇಂತಹ ಅಸಾಧಾರಣ ಪರಿಸ್ಥಿತಿ ನಿಭಾವಣೆಗೆ ಜನಾದೇಶವಿರುವ ಸ್ಥಳೀಯ ಸರ್ಕಾರ ಇರುವುದು ಅಷ್ಟೇ ಸೂಕ್ತವಾದದ್ದು. ಯಾಕೆಂದರೆ, ಯಾವುದೇ ಸಂಕಷ್ಟವಿರಲಿ, ತಮ್ಮ ಬದುಕು ಕಟ್ಟಿಕೊಳ್ಳಲು ನಮ್ಮ ಗ್ರಾಮೀಣ ಜನತೆ ಮೊಟ್ಟಮೊದಲು ಮುಖಮಾಡುವುದು ತಮಗೆ ಅತ್ಯಂತ ಸಮೀಪವಿರುವ ಗ್ರಾಮ ಸರ್ಕಾರದ ಕಡೆಗೆ. ನಾವೇ ಚುನಾಯಿಸಿದ, ನಮ್ಮ ಪ್ರತಿನಿಧಿಗಳನನ್ನೊಳಗೊಂಡ ನಮ್ಮ ಪರವಾಗಿ ಆಡಳಿತದ ಚುಕ್ಕಾಣಿ ಹಿಡಿದಿರುವ ಸರ್ಕಾರವನ್ನು ನಮ್ಮ ಸಮಸ್ಯೆಗಳಿಗೆ ಗಮನಕೊಡಿ ಎಂದು ಕೇಳುವಲ್ಲಿ ನಾವು ಹಕ್ಕುದಾರರು; ಅದಕ್ಕೆ ಸ್ಪಂದಿಸಿ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಸರ್ಕಾರವಾಗಿ ಅವರು ಬದ್ಧರು. ಇಂತಹ ಸರ್ಕಾರವೇ ಇಲ್ಲದೇ ಹೋದರೆ, ಆ ಜಾಗದಲ್ಲಿ ಮೇಲ್–ಹಂತದ ಸರ್ಕಾರಗಳು ನಾಮನಿರ್ದೇಶನಗೊಂಡ ಸಮಿತಿಯೋ, ನೇಮಕ ಮಾಡಿದ ಅಧಿಕಾರಿಗಳೋ ಆಡಳಿತದ ಚುಕ್ಕಾಣಿ ಹಿಡಿಯುವಂತಾದರೆ ತಮ್ಮನ್ನು ಆಯ್ಕೆ ಮಾಡದ ಜನರಿಗೆ ಅವರೆಷ್ಟು ಬದ್ಧತೆ ತೋರಿಯಾರು? ನೇಮಕ ಮಾಡಿದ ಮೇಲ್–ಹಂತದ ಸರ್ಕಾರಕ್ಕೆ ಬದ್ಧತೆ ತೋರಬೇಕಾದ ಒತ್ತಡ ಅವರ ಮೇಲೆ ಉಂಟಾಗುವುದಿಲ್ಲವೇ?

ಜನಾದೇಶವಿರುವವವರೇ ಸ್ಥಳೀಯ ಸರ್ಕಾರವಾಗಿ ಮುಂದುವರಿಯುವುದರಿಂದ ಪ್ರಜಾಪ್ರಭುತ್ವದ ಆಶಯಕ್ಕೂ ಧಕ್ಕೆ ಉಂಟಾಗದೇ, ಸಾಮಾಜಿಕ ನ್ಯಾಯದ ಅಡಿಯಲ್ಲಿ ನಿರ್ಧಾರ ಕೈಗೊಂಡಂತಾಗುತ್ತದೆ. ಈಗಾಗಲೇ ಸಾಕಷ್ಟು ಹೊಣೆಗಾರಿಕೆ ಇರುವ ಅಧಿಕಾರಿಗಳನ್ನು ಇನ್ನೊಂದು ಹೊಣೆ ನೀಡಿ ಆಡಳಿತಾಧಿಕಾರಿಗಳಾಗಿ ನೇಮಿಸಿ, ಒಬ್ಬ ಅಂತಹ ಅಧಿಕಾರಿಗೆ 5–6 ಗ್ರಾಮ ಪಂಚಾಯತ್‌ಗಳ ಹೆಚ್ಚುವರಿ ಜವಾಬ್ದಾರಿ ನೀಡಿದರೆ, ಹೊಣೆಗಾರಿಕೆಯ ಭಾರ ತಾಳಲಾರದೇ, ಸಮರ್ಪಕವಾಗಿ ಕಾರ್ಯನಿರ್ವಹಿಸಲಾಗದೇ, ಪರಿಸ್ಥಿತಿ ಬಿಗಡಾಯಿಸಬಹುದು. ಆಡಳಿತ ಸಮಿತಿ ನೇಮಕ ಮಾಡಲು ಹೊರಟರೆ ಪಕ್ಷಾತೀತವಾಗಿರಬೇಕಾದ ಪಂಚಾಯತ್ ವ್ಯವಸ್ಥೆಯಲ್ಲಿ ಪಕ್ಷ ರಾಜಕೀಯದ ತಾಂಡವ ಪ್ರಾರಂಭವಾಗಬಹುದು. **ಈ ನೆಲೆಯಲ್ಲಿ, ಚುನಾವಣೆ ನಡೆಸಲು ಅಸಾಧ್ಯವಾದ ಪರಿಸ್ಥಿತಿ ಇರುವಲ್ಲಿ, ಉಂಟಾಗಿರುವ ನಿರ್ವಾತ ಪರಿಸ್ಥಿತಿಯನ್ನು ಸರಿದೂಗಿಸಲು ಪ್ರಸ್ತುತ ಇರುವ ಸ್ಥಳೀಯ ಸರ್ಕಾರವನ್ನೇ ಮುಂದುವರಿಸುವುದು ರಾಜ್ಯ ಸರ್ಕಾರ ಕೈಗೊಳ್ಳುವ ಸೂಕ್ತ ನಿರ್ಧಾರವಾಗಬಹುದು. ಅಲ್ಲದೇ ಈ ನಿರ್ಧಾರ, ಗಾಂಧೀಜಿಯವರ ಗ್ರಾಮ ಸ್ವರಾಜ್ಯದ ಕಲ್ಪನೆಗೆ ಅನುಗುಣವಾಗಿ, ಪ್ರಜಾತಂತ್ರ ವ್ಯವಸ್ಥೆಯ ಉಳಿವಿಗೆ ಪುಷ್ಟಿ ನೀಡಬಹುದು.**

ಕೃಪಾ ಎಂ.ಎಂ.
ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನ ಕಾರ್ಯಕರ್ತರು

Mobile No: 99453 75430
Email: mm.kripa@gmail.com

